ಶ್ರೀ ಎಸ್. ಸುರೇಶ್‌ಕುಮಾರ್ :— ಈ ಮೂರು ದಿವಸಗಳ ಕಾಲ ಮಾನ್ಯ ಶಿವರಾಮೇಗೌಡರವರ ಭಾಷಣ ಕೇಳಿದ ಮೇಲೆ ನನಗೆ ಪ್ರಾಮಾಣಿಕವಾಗಿ ಏನು ಅನಿಸಿತು ಎಂದರೆ, ಜನತಾದಳದಲ್ಲಿ ಜನತಾದಳ ಹೆತ್ತ ಮಕ್ಕಳಿಗಿಂತ ಜನತಾದಳ ಸಾಕಿದ ಮಗನಿಗೆ ಹೆಚ್ಚು ವಿಶ್ವಾಸ, ಇದೆ ಎಂದು.

ಶ್ರೀ ಎಲ್.ಆರ್. ಶಿವರಾಮೇಗೌಡ :— ಎಲ್ಲರನ್ನೂ ಹೊರಗಡೆ ಕಳುಹಿಸುತ್ತೀರಲ್ಲಾ ನೀವು, ನಮ್ಮ ಈಶ್ವರಪ್ಪನವರನ್ನು ಯಾವಾಗ ಹೊರಗಡೆ ಕಳುಹಿಸುತ್ತೀರಿ? ಇದನ್ನು ಹೇಳಬೇಕು.

5) ಮಾನ್ಯ ರಾಜಪಾಲರ ಭಾಷಣದ ಮೇಲೆ ಚರ್ಚೆಯನ್ನು ಸೆಕೆಂಡ್ ಮಾಡುವ ಸದಸ್ಯರ ಗೈರುಹಾಜರಿ ಬಗ್ಗೆ ಚರ್ಚೆ.

ಅಧ್ಯಕ್ಷರು :— ಅನುಮೋದನೆ ಮಾಡಿರತಕ್ಕಂಥ ಶ್ರೀ ಮತಿ ಲಲಿತಾನಾಯಕ್ ರವರು ಸದನದಲ್ಲಿ ಹಾಜರು ಇಲ್ಲದೇ ಇರುವುದರಿಂದ, ಅಧಿಕೃತ ವಿರೋಧ ಪಕ್ಷದ ಪರವಾಗಿ ಮಾನ್ಯ ಸಭಾಪತಿಯವರು ಮಾತನಾಡಲಿ

ಶ್ರೀ. ಕೆ.ಎನ್. ನಾಗೇಗೌಡ :— ಸಾರ್ ಅಲ್ಲಿಯವರೆಗೆ ಬೇರೆ ಯಾರಾದರೂ..

ಅಧ್ಯಕ್ಷರು :— ನಾನು ಏನು ಮಾಡಲಿ I treat it as seconded.

Sri. K.N. NAGEGOWDA :— Sir, without seconding...

MR. SPEAKER :— What do you want me to do, tell me?

SRI K.N. NAGEGOWDA :— She may not know the time.

ಅಧ್ಯಕ್ಷರು :— ಅಂದರೆ ಅವರಿಗೆ ಗೊತ್ತಿಲ್ಲದ ರೀತಿಯಲ್ಲಿ ನಾನೇನಾದರೂ ಈ ಸಭೆಯನ್ನು ಕರೆದಿದ್ದೇನೆಯೇ?

(Interruptions)

MR. SPEAKER :— Mr. Nagegowda, you are Senior Legislator. Do you want me to adjourn the House? Please answer me.

ಶ್ರೀ ಕೆ.ಎನ್. ನಾಗೇಗೌಡ :— ವಂದನಾರ್ಪಣೆ ಮಾಡತಕ್ಕಂಥ ಅಜೆಂಡ ಛೇಂಜ್ ಆಗಿಲ್ಲವೆ?

(Interruptions)

MR. SPEAKER :— Please answer me, you are a senior Legislator. You want me to adjourn the House?

SRI K.N. NAGEGOWDA :— I am sorry Sir...

MR. SPEAKER :— Then, what do you want me to do?

ಶ್ರೀ ಕೆ.ಎನ್. ನಾಗೇಗೌಡ :— ಈ ವಂದನಾರ್ಪಣೆ ಮಾಡತಕ್ಕಂಥ ಅಜೆಂಡಾ conventionally last hour of the day ಬರುತ್ತದೆ. ಇವತ್ತು ವಿಶೇಷವಾಗಿ 9-00ಕ್ಕೆ...

ಅಧ್ಯಕ್ಷರು :— ನಿನ್ನೆ ಸದನದಲ್ಲಿ ನಾನು ಘೋಷಣೆ ಮಾಡಿ ಹೇಳಿದ್ದೇನೆ. ಶೂನ್ಯ ವೇಳೆಯಾಗಲಿ, ಗಮನ ಸೆಳೆಯುವ ಸೂಚನೆಯಾಗಲಿ, ಇರುವುದಿಲ್ಲ. We are taking up only this matter ಎಂದು ಹೇಳಿದ್ದೇನೆ.

SRI K.N. NAGEGOWDA :— My request is, without seconding the resolution....

MR. SPEAKER :— I will treat it as seconded. What else I can do?

SRI M.P. PRAKASH :— Of course, there is a lapse on our part.

ಶ್ರೀ ಎಂ.ಪಿ.ಪ್ರಕಾಶ್ :— ಈಗ ತಾವು ದಯವಿಟ್ಟು ಪ್ರಶ್ನೋತ್ತರ ತೆಗೆದುಕೊಳ್ಳಿ. ನಂತರ, I will see that it is seconded.

ಶ್ರೀ ಮಲ್ಲಿಕಾರ್ಜು ಖರ್ಗೆ :— ಇವರಿಗೋಸ್ಕರ ಒಂದೊಂದು ಕನ್ವೆನ್‌ಷನ್ ಮುರಿಯುವುದಕ್ಕಾಗುವುದಿಲ್ಲ. It is their bounden duty. ಯಾರಾದರೊಬ್ಬರು ಪ್ರಪೋಸ್ ಮಾಡಿದ ಮೇಲೆ ಸೆಕೆಂಡ್ ಮಾಡುವುದಕ್ಕೆ ಇರಬೇಕಾಗುತ್ತದೆ.

MR. CHAIRMAN :— Probably I would go down in the history as a Speaker carrying largest number of insults.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಒಂದು ವೇಳೆ ಅವರು ಮಾತನಾಡುವುದಕ್ಕೆ ನಿಮ್ಮ ಪರ ಇಲ್ಲವೆಂದರೆ ಮತ್ತೊಬ್ಬರನ್ನು ರೆಡಿ ಮಾಡಿರಬೇಕು. ನಿಮ್ಮ ಚೀಫ್ ವಿಪ್ ಏನು ಮಾಡುತ್ತಿದ್ದಾರೆ?

SRI K.N. NAGEGOWDA: This is an extraordinary situation.

SRI MALLIKARJUNA KHARGE :— What is that extraordinary situation?

(Interruptions)

SRI K.N. NAGEGOWDA :— I take a strong objection

(Interruptions)

ಅಧ್ಯಕ್ಷರು :— ನಿನ್ನೆ ನಾನು ನಾಳೆ ಸ್ವಲ್ಪ ಹೊತ್ತು ಜಾಸ್ತಿ ಕುಳುತಿಕೊಳ್ಳಬೇಕು ಎಂದು ಹೇಳಿದ್ದೇನೆ. ಇದಕ್ಕಾಗಿಯೇ ಬೆಳಿಗ್ಗೆ 9ಕ್ಕೆ ಸೇರುತ್ತೇವೆಂದು ಹೇಳಿದ್ದೇನೆ. ನಿನ್ನೆ ಸದನದಲ್ಲಿ ನಾನು ಏನು ಹೇಳಿದೆನೆಂದರೆ it will not be half day, we will have to sit for the whole day. ಎನ್ನತಕ್ಕಂಥ ಮಾತನ್ನು ಹೇಳಿದ್ದೇನೆ. ನಿನ್ನೆ ಏನು ಲ್ಯಾಪ್ಸ್ ಆಗಿದೆ ಅದನ್ನು ಮಾತ್ರ ತೆಗೆದುಕೊಂಡು, ಶೂನ್ಯವೇಳೆಯಾಗಲಿ, ಗಮನ ಸೆಳೆಯುವ ಸೂಚನೆಯಾಗಲಿ ತೆಗೆದುಕೊಳ್ಳುವುದಿಲ್ಲ ಎಂದು ಹೇಳಿದ್ದೇನೆ. Then I called my Secretary and said ಇವತ್ತಿನ ಪ್ರಶ್ನೆಗಳನ್ನು ಕೂಡ ಕ್ಯಾರಿಓವರ್ ಮಾಡೋಣ ಎಂದು ಹೇಳಿದ್ದೇನೆ. We will take it up on some other day, because I have to accommodate both the opposition parties. We have hardly any time. you had scheduled programme in such a way...

(interruptions)

SRI K.N. NAGEGOWDA :— We apologise. Without seconding the Resolution it will not...

SRI MALLIKARJUNA KHARGE :— Nobody is ready to second it.

(Interruptions)

ಶ್ರೀ ಕೆ.ಎಸ್. ಈಶ್ವರಪ್ಪ :— ಈಗ ಏನು ಮಾಡಬೇಕು ಎಂಬುದನ್ನಾದರೂ ತಾವು ಹೇಳಿ.

SRI MALLIKARJUNA KHARGE :— When nobody is coming forward to second it, how can this House be responsible?

(Interruptions)

MR. SPEAKER : Can we have it seconded by somebody else? It is very clear. Don't feel embarrassed. ಅವರು ಮೋಷನ್‌ನ್ನು ಮೂವ್ ಮಾಡಿ ಪ್ರಪೋಸ್ ಮಾಡಿದ್ದಾರೆ. ಅವರು ಸೆಕೆಂಡ್ ಮಾಡಿದ್ದಾರೆ. As per records, she has already seconded. ಸೆಕೆಂಡ್ ಮಾಡಿದವರು ಮಾತನಾಡಬೇಕಾಗಿತ್ತು. ಆದರೆ ಅವರು ಸದನದಲ್ಲಿ ಹಾಜರು ಇಲ್ಲದೇ ಇರುವುದರಿಂದ, ಅವರು ಬಂದ ಮೇಲೆ ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ. It is already treated as seconded. without her seconding the Resolution, I could not have taken it up for discussion.

ಶ್ರೀ ಎಂ.ಪಿ. ಪ್ರಕಾಶ್:— ತಾವು ದೊಡ್ಡ ಮನಸು ಮಾಡಿ ಎಲ್ಲರಿಗೂ ಕೂಡ ಮಾತನಾಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಡುತ್ತೀರಿ ಹಾಗೂ ಬಹಳ ನಿಷ್ಪಕ್ಷಪಾತವಾಗಿ ನಡೆದುಕೊಳ್ಳುತ್ತೀರಿ. ಇವತ್ತು ಅವರು ಯಾವುದೋ ಕಾರಣದಿಂದ ಬಾರದೇ ಇರಬಹುದು. It could happen otherwise also.

ಅಧ್ಯಕ್ಷರು:— ಅವರಿಗೆ ಏನೋ ಒಂದು ತೊಂದರೆ ಇರಬಹುದು. The Motion is already moved and seconded.

ಶ್ರೀ ಎಂ.ಪಿ. ಪ್ರಕಾಶ್:— ಹಾಗದರೆ ತಾವು ಈಗ ಒಪ್ಪಿಗೆ ಕೊಡುವುದಾದರೆ ಸಂತೋಷ, ಇಲ್ಲದಿದ್ದರೆ ಪ್ರಶ್ನೋತ್ತರ ನಂತರವಾದರೂ ನಮ್ಮ ಒಬ್ಬರು ಸದಸ್ಯರು ಮಾತನಾಡುತ್ತಾರೆ.

ಅಧ್ಯಕ್ಷರು:— ಬೇಡ Technically the Motion is moved as proposed by Mr. Shivaramegowda. It has already been seconded by Smt. Lalitha Naik. He has completed his speech. ಅವರು ಇ-ಲ್ಲ ಇದ್ದರೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಬಹುದಾಗಿತ್ತು, ಏನು ಕಾರಣವೋ ಏನೋ ನನಗೆ ಗೊತ್ತಿಲ್ಲ. ಅವರು ಬಂದ ನಂತರ ಮಾತನಾಡಲಿ.

SRI J.H. PATEL (CHIEF MINISTER) She had some difficulty in her family. She took permission and she went.

MR SPEAKER: It is alright. It is already treated as seconded. But the difficulty is, she has not communicated to the Chair. I did not know about it. ನಾನು ತಮ್ಮೆಲ್ಲರಲ್ಲಿ ವಿನಂತಿ ಮಾಡುತ್ತೇನೆ, ಇವತ್ತಿನ ದಿವಸದ ಪ್ರಶ್ನೆಗಳನ್ನು ಲ್ಯಾಪ್ಸ್ ಮಾಡುವುದಿಲ್ಲ. ಮತ್ತೊಂದು ದಿವಸ ಪುನ : ತೆಗೆದುಕೊಳ್ಳುತ್ತೇನೆ. ಏಕೆಂದರೆ ಟೈಮ್ ಅಡ್ಜಸ್ಟ್ ಮಾಡಬೇಕಾಗಿರುವುದರಿಂದ ಹಾಗೂ ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶ ಕೊಡಬೇಕಾಗಿರುವುದರಿಂದ ಇವತ್ತಿನ ಪ್ರಶ್ನೆಗಳನ್ನು ತಡೆಹಿಡಿದು ಮತ್ತೊಂದು ದಿವಸ ತೆಗೆದುಕೊಳ್ಳುತ್ತೇನೆ. ಯು.ಆರ್. ಸಭಾಪತಿಯವರು ತಾವು ಮಾತನಾಡಿ...

ಶ್ರೀ ಯು.ಆರ್. ಸಭಾಪತಿ (ಉಡುಪಿ) :— ಮಾರ್ಚ್ 8ರಂದು ಮಾನ್ಯ ರಾಜ್ಯಪಾಲರು ಈ ಸದನದಲ್ಲಿ ಏನು ಭಾಷಣ ಮಾಡಿದ್ದಾರೆ, ಇದನ್ನು ನಾನು ಅನಿವಾರ್ಯವಾಗಿ ವಿರೋಧಿಸಲೇಬೇಕಾದ ಒಂದು ಸಂದರ್ಭದಲ್ಲಿ, ಇವತ್ತಿನ ರಾಜ್ಯಪಾಲರ ಭಾಷಣ ಕೇವಲ ಚರ್ವಿತಚರ್ವಣವಾಗಿದೆ ಎನ್ನತಕ್ಕಂಥ ಮಾತನ್ನು ಸ್ಪಷ್ಟಪಡಿಸಬಯಸುತ್ತೇನೆ. ನಮ್ಮ ಮಿತ್ರರಾದ ಮಾನ್ಯ ಶಿವರಾಮೇಗೌಡರು ಸರ್ಕಾರವನ್ನು ಬೆಂಬಲಿಸಿ ರಾಜ್ಯಪಾಲರ ಭಾಷಣ ಮೇಲೆ ಮಾತನಾಡಿದ್ದಾರೆ.

(6) ಮಾನ್ಯ ರಾಜ್ಯಪಾಲರ ಭಾಷಣದ ವಂದನಾರ್ಪಣ ಪ್ರಸ್ತಾಪದ ಮೇಲಿನ ಚರ್ಚೆ.

ಅಧ್ಯಕ್ಷರು :— ನಾವು ಏನು ಇದನ್ನು ಸರ್ಕ್ಯುಲೇಟ್ ಮಾಡಿದ್ದೇವೆ, ನೀವು ಅದನ್ನು ಪ್ರಿಂಟ್ ಮಾಡಬೇಡಿ. ಏಕೆಂದರೆ ನೀವು ಪ್ರಿಂಟ್ ಮಾಡಿದರೆ I cannot allow those questions to be taken up on the floor of the House on another day. So to enable the members to have their rights to take up those questions, I am requesting all the journalists, please do not print the answers for starred questions.

+ಯು.ಆರ್. ಸಭಾಪತಿ (ಉಡುಪಿ) :— ಮಾನ್ಯ ರಾಜ್ಯಪಾಲರ ಭಾಷಣ ಕೇವಲ ಚರ್ವಿತ ಭಾಷಣವಾಗಿದೆ ಎಂದು ಹೇಳಬಯಸುತ್ತೇನೆ. ಏಕೆಂದರೆ, ನನ್ನ ಮಿತ್ರರಾದ ಶ್ರೀ ಎಲ್.ಆರ್. ಶಿವರಾಮೇಗೌಡರು ಕಳೆದ ಎರಡು ದಿವಸಗಳಿಂದ ಸರ್ಕಾರವನ್ನು ಮಾನ್ಯ ರಾಜಪಾಲರ ಭಾಷಣದ ಮೂಲಕ ಸಮರ್ಥನೆಯನ್ನು ಮಾಡಲು ಹೊರಟಿರತಕ್ಕಂಥದನ್ನು ನೋಡಿದಾಗ ಅವರ ಸಮರ್ಥನೆ ಯಾವುದೇ ರೀತಿಯ ಹುರುಳಿಲ್ಲದ ಕೆಲವು ಮಾತುಗಳನ್ನು ಅವರು ಹೇಳುತ್ತಾ ಬಂದಿರುತ್ತಾರೆ. ಅದನ್ನು ಕೊನೆಯಲ್ಲಿ ಮಾನ್ಯ ಬೈರೇಗೌಡರು ಒಪ್ಪಿಕೊಂಡರು. ಅದನ್ನು ಅವರ ವೈಯಕ್ತಿಕ ವಿಚಾರಕ್ಕೆ ಬಿಟ್ಟಿದ್ದು. ಒಬ್ಬ ಸಹ ಸದಸ್ಯರ ಮೂಲಕ ತಮ್ಮ ಸರ್ಕಾರವನ್ನು ಜಸ್ಟಿಫಿಕೇಷನ್ ಮಾಡುವಂಥ ಪರಿಸ್ಥಿತಿ ಆಮೇಲೆ ಅನುಮೋದಕರು ಯಾರಿದ್ದಾರೆ, ಅವರಿಗೆ ಮಾತನಾಡಲು ಅವಕಾಶ ಇದ್ದರೂ ಕೂಡ ಅವರು ಈ ಸದನದಲ್ಲಿ ಹಾಜರಿಲ್ಲ.